ಆ) ಹೌದು

ಇ) 10.00 ಲಕ್ಷ ರೂ.ಗಳ ಹೆಚ್ಚುವರಿ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

ಬೆಂಗಳೂರು ರೇಸ್ ಕೋರ್ಸ್‌ನ್ನು ಸ್ಥಳಾಂತರಿಸುವುದು.

2906:(3951)

ಶ್ರೀ ರಾಮಲಿಂಗ ರೆಡ್ಡಿ (ಜಯನಗರ) ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ರೇಸ್ ಕೋರ್ಸ್ ನಗರದ ಮಧ್ಯ ಭಾಗದಲ್ಲಿದ್ದು ರೇಸ್ ನಡೆಯುವ ವೇಳೆಯಲ್ಲಿ ವಾಹನ ಸಂಚಾರಕ್ಕೆ ತೊಂದರೆಯುಂಟಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಈ ರೇಸ್‌ಕೋರ್ಸ್ ಅನ್ನು ನಗರದ ಹೊರ ಭಾಗಕ್ಕೆ ಸ್ಥಳಾಂತರಿಸಲು ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯ ಮಂತ್ರಿಗಳು)

ಅ) ಹೌದು. ಆದರೆ, ಈ ತೊಂದರೆಯನ್ನು ನಿವಾರಿಸಲು ಕ್ಲಬ್‌ನ ವತಿಯಿಂದ ಈಗ ಒಂದು ಸಬ್ ವೇ ಯನ್ನು ನಿರ್ಮಿಸಲಾಗಿದೆ.

ಆ) ರೇಸ್ ಕೋರ್ಸ್ ಅನ್ನು ನಗರದ ಹೊರಭಾಗಕ್ಕೆ ಸ್ಥಳಾಂತರಿಸುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದ್ದು ಸಚಿವ ಸಂಪುಟವು ತೆಗೆದುಕೊಂಡ ತೀರ್ಮಾನದಂತೆ ಸಚಿವ ಸಂಪುಟದ ಉಪ ಸಮಿತಿಯನ್ನು ರಚಿಸಿದ್ದು ಆ ಸಮಿತಿಯು ಈ ವಿಷಯವನ್ನು ಪರಿಶೀಲಿಸುತ್ತಿದೆ.

ಗುಳ್ಳೇದಗುಡ್ಡ ಕ್ಷೇತ್ರದ ಪರಿಶಿಷ್ಟ ಜನಾಂಗದವರಿಗೆ ಮಂಜೂರು ಮಾಡಿರುವ ಟಿ.ವಿ.ಗಳ ಕುರಿತು.

2907:(3901)

ಶ್ರೀ ರಾಜಶೇಖರ.ವಿ.ಶೀಲವಂತ (ಗುಳ್ಳೇದಗುಡ್ಡ): ಮಾನ್ಯ ವಾರ್ತಾ ಮತ್ತು ಪ್ರಚಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ಜಿಲ್ಲೆಗೆ (ಹೊಸ ಬಾಗಲಕೋಟೆ ಜಿಲ್ಲೆ ಸೇರಿ) ಸೇರಿದ ಪರಿಶಿಷ್ಟ ಜನಾಂಗದವರಿಗೆ ಕೊಡಲು ಮಂಜೂರು ಮಾಡಿದ ಬಣ್ಣ ಟಿ.ವಿ.ಗಳ ಸಂಖ್ಯೆ ಎಷ್ಟು? (ಮತಕ್ಷೇತ್ರ ವಿವರ ನೀಡುವುದು)

ಆ) ಅದರಲ್ಲಿ ಗುಳೇದಗುಡ್ಡ ಮತಕ್ಷೇತ್ರಕ್ಕೆ 1997-98ನೇ ಸಾಲಿನಲ್ಲಿ ಟಿ.ವಿ.ಗಳನ್ನು ಮಂಜೂರು ಮಾಡಲಾಗಿದೆಯೇ? ಹಾಗಿದ್ದರೆ ಎಷ್ಟು?

ಇ) ಇಲ್ಲದಿದ್ದರೆ ಏಕೆ?

ಶ್ರೀ ಎಂ.ಸಿ.ನಾಣಯ್ಯ (ಕಾನೂನು, ವಾರ್ತಾ ಮತ್ತು ಪ್ರಚಾರ ಸಚಿವರು):

ಅ) ಈವರೆಗೆ ಒಟ್ಟು 70 ಬಣ್ಣದ ದೂರದರ್ಶನ ಸೆಟ್ಟುಗಳನ್ನು ಒದಗಿಸಲಾಗಿದೆ. ಕ್ಷೇತ್ರವಾರು ಸ್ಥಾಪನಾ ವಿವರಗಳು ಈ ಕೆಳಕಂಡಂತಿವೆ.

1) ಬಿಜಾಪುರ - 8

2) ತಿಕೋಟಾ - 15

3) ಬಸವನ ಬಾಗೇವಾಡಿ - 6

4) ಬಳ್ಳೊಳ್ಳಿ - 14

5) ಇಂಡಿ - 3

6) ಗುಳೇದಗುಡ್ಡ - 2

7) ಹುನಗುಂದ - 1

8) ಬಾದಾಮಿ - 3

9) ಜಮಖಂಡಿ - 2

10) ಮುಧೋಳ - 5

11) ಬೆಳಗಿ - 2

12) ಸಿಂಧಗಿ - 2

13) ಮುದ್ದೇಬಿಹಾಳ - 2

14) ಹೂವಿನ ಹಿಪ್ಪರಗಿ - 1

15) ಬಾಗಲಕೋಟೆ -4

ಒಟ್ಟು -70

ಆ) ಇಲ್ಲ

ಇ) 1997-98ನೇ ಸಾಲಿನಿಂದ ವಿಶೇಷ ಘಟಕ ಯೋಜನೆಯಡಿಯಲ್ಲಿನ ಅನುದಾನವನ್ನು ಸಮಾಜ ಕಲ್ಯಾಣ ಇಲಾಖೆಯು ಹಿಂದಕ್ಕೆ ಪಡೆದು ಒಗ್ಗೂಡಿಸಿರುವುದರಿಂದ ದೂರದರ್ಶನಗಳನ್ನು ಖರೀದಿಸುವ ಯೋಜನೆ ಜಾರಿಯಲ್ಲಿರುವುದಿಲ್ಲ.

ಗುಳ್ಳೇದಗುಡ್ಡ ಮತ ಕ್ಷೇತ್ರದಲ್ಲಿ ರಂಗಮಂದಿರ ನಿರ್ಮಾಣ.

2908:(3902)

ಶ್ರೀ ರಾಜಶೇಖರ ವಿ.ಶೀಲವಂತ (ಗುಳ್ಳೇದಗುಡ್ಡ): ಮಾನ್ಯ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವೆಯರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ರಾಜ್ಯದ ಯಾವ ಯಾವ ಕಡೆಗಳಲ್ಲಿ ಬಯಲು ರಂಗಮಂದಿರಗಳಿಗೆ ಮಂಜೂರಾತಿ ನೀಡಲಾಗಿದೆ? (ಮತಕ್ಷೇತ್ರವಾರು ವಿವರ ನೀಡುವುದು)

2) ಗುಳೇದಗುಡ್ಡ ಮತಕ್ಷೇತ್ರದಲ್ಲಿ ಬಯಲು ರಂಗಮಂದಿರ ಮಂಜೂರು ಮಾಡಲು ತಿಳಿಸಿ ಬೇಡಿಕೆಗಳು ಬಂದಿವೆಯೇ?

3) ಹಾಗಾದರೆ ಯಾವ ಯಾವ ಗ್ರಾಮಗಳಿಗೆ ಮಂಜೂರು ಮಾಡಲಾಗಿದೆ?

4) ಇಲ್ಲದಿದ್ದರೆ, ಅದಕ್ಕೆ ಕಾರಣಗಳೇನು?

ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್ (ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ರಾಜ್ಯ ಸಚಿವೆಯರು.)

1) ಅನುಬಂಧದಲ್ಲಿ ವಿವರ ನೀಡಲಾಗಿದೆ

2) ಗುಳೇದಗುಡ್ಡದಲ್ಲಿ ರಂಗಮಂದಿರ ನಿರ್ಮಾಣವಾಗುತ್ತಿದೆ. ಬಯಲು ರಂಗಮಂದಿರ ನಿರ್ಮಿಸಲು ಬೇಡಿಕೆ ಬಂದಿರುವುದಿಲ್ಲ.